**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 492/2021**

**ಸಿ.ಡಬ್ಲ್ಯೂಃ 6**
**ಪಿ.ಡಬ್ಲೂಃ** 2

**ಸಾಕ್ಷಿದಾರರ ಹೆಸರು ಃ ಖಾಸೀಂ**
**ತಂದೆಯ ಹೆಸರು ಃ ಯಾಕೂಬ್**
**ವಯಸ್ಸು ಃ 40 ವರ್ಷ**
**ಉದ್ಯೋಗ ಃ ಗಾರೆಕೆಲಸ**
**ವಾಸಸ್ಥಳ ಃ ಬನ್ನೂರು, ನ ರಾ ಪುರ ತಾಲ್ಲೂಕು.**

**ದಿನಾಂಕಃ 9.6.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ತಿಳಿದಿರುವುದಿಲ್ಲ. ನನಗೆ ಪೊಲೀಸರು ಈಗ್ಗೆ 5 ವರ್ಷಗಳ ಹಿಂದೆ ಬನ್ನೂರು ಸರ್ಕಲ್ ಬಳಿ ಪೊಲೀಸರು ಒಂದು ದಾಖಲೆಯನ್ನು ತೋರಿಸಿ ಸಹಿ ಮಾಡುವಂತೆ ಸೂಚಿಸಿದರು ಅದರಂತೆ ನಾನು ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ಪೊಲೀಸರು ಎರಡು ಪೋಟೋಗಳನ್ನು ತೆಗೆದುಕೊಂಡರು. ಸದರಿ ದಾಖಲೆಯಲ್ಲಿ ಏನು ವಿಚಾರ ಬರೆದಿದೆ ನನಗೆ ಗೊತ್ತಿಲ್ಲ. ಸದರಿ ಪೋಟೋವನ್ನು ಯಾವ ಕಾರಣಕ್ಕಾಗಿ ತೆಗೆದರು ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ನಿಪಿ-1 ನ್ನು ತೋರಿಸಿ ಅದರಲ್ಲಿರುವ ಸಹಿಯ ಬಗ್ಗೆ ಕೇಳಲಾಗಿ ಅದರಲ್ಲಿರುವ ಸಹಿ ಮಾತ್ರ ನನ್ನದು, ಉಳಿದ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ-2 ಮತ್ತು 3 ಎಂದು ನಿಶಾನೆಗೊಂಡಿರುತ್ತವೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನಾನು ನೋಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**ಃಃಪಾಟೀ ಸವಾಲುಃ ಮಾನ್ಯ ಎಪಿಪಿಯವರಿಂದಃಃ**

ದಿನಾಂಕಃ 11.9.2020 ರಂದು ನ ರಾ ಪುರ ತಾಲ್ಲೂಕು ಬನ್ನೂರು ಗ್ರಾಮದ ಬಸ್ ನಿಲ್ದಾಣ ಹತ್ತಿರ ಬಾಳೆಹೊನ್ನೂರು-ಮಾಗುಂಡಿ ರಸ್ತೆಯಲ್ಲಿ ಸುಮಾರು 7.15 ಗಂಟೆಗೆ ಬನ್ನೂರು ಬಸ್ ನಿಲ್ದಾಣದ ಹತ್ತಿರ ಚಾಸಾ-1 ರವರ ಇಲಾಖಾ ವಾಹನ ತಲುಪುತ್ತಿದ್ದಂತೆ ಅಲ್ಲಿದ್ದ ಒಬ್ಬ ಆಸಾಮಿ ಅವರನ್ನು ನೋಡಿ ಓಡಲು ಪ್ರಯತ್ನಿಸಿದ್ದು, ಚಾಸಾ-1 ಹಾಗೂ ಅವರ ಸಿಬ್ಬಂದಿಗಳಾದ ಚಾಸಾ-2 ರಿಂದ 5 ರವರುಗಳು ಸದರಿ ವ್ಯಕ್ತಿಯನ್ನು ಸುತ್ತುವರಿದು ಹಿಡಿದಿದ್ದು, ತದನಂತರ ಸದರಿ ವ್ಯಕ್ತಿಯನ್ನು ತಪಾಸಣೆ ಮಾಡಲಾಗಿ ಆತನ ಹೆಸರು ಮಹೇಶ್ ಯಾನೆ ಅಭಿ ಯಾನಿ ಅಭೀಕ್ಷ ಬಿನ್ ವೆಂಕಟೇಶ್ ಪೂಜಾರಿ ಎಂದು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯಕ್ತಿಯ ಕೈಯಲ್ಲಿ ಒಂದು ಕಪ್ಪು ಬಣ್ಣದ ಬ್ಯಾಗ್ ಇದ್ದು, ಅದನ್ನು ತೆಗೆದು ತೋರಿಸುವಂತೆ ಸೂಚಿಸಿದ್ದು ಆತ ಅನುಮಾನಾಸ್ಪದವಾಗಿ ಅದನ್ನು ತೆರೆಯಲು ಹಿಂದೇಟು ಹಾಕಿದ್ದು, ತದನಂತರ ತೆರೆದು ತೋರಿಸಲು ಸೂಚಿಸಿದ್ದರಿಂದ ಸದರಿ ವ್ಯಕ್ತಿಯು ಅದನ್ನು ತೆಗೆದು ತೋರಿಸಿದ್ದು ಅದರಲ್ಲಿ ಪೇಪರ್ ನಲ್ಲಿ ಸುತ್ತಿದ್ದಂತಹ ಎಲೆ, ಹೂ, ಬೀಜ ಇರುವ ಸೊಪ್ಪಿನ ರೀತಿ ಇರುವ ಗಾಂಜಾದಂತೆ ಕಾಣುವ ವಸ್ತು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಸ್ತುವನ್ನು ವಾಸನೆ ನೋಡಿದಾಗ ಅದು ಗಾಂಜಾ ಎಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ತದನಂತರ ಚಾಸಾ-5 ರವರ ಮೂಲಕ ಸ್ಥಳೀಯವಾಗಿ ಲಭ್ಯವಿದ್ದ ಪಂಚ ಸಾಕ್ಷಿದಾರರಾದ ನನ್ನನ್ನು ಮತ್ತು ಚಾಸಾ-7 ರವರನ್ನು ಬರಮಾಡಿಕೊಂಡು ನಮ್ಮ ಸಮಕ್ಷಮ ಪ್ರಕರಣದ ಬಗ್ಗೆ ತಿಳಿಸಿ ಹೇಳಿ ಆರೋಪಿತರನ್ನು ಅಂಗಶೋಧನೆ ಮಾಡಲಾಗಿ ಆತನ ಪ್ಯಾಂಟಿನ ಬಲಜೇಬಿನಲ್ಲಿ ಒಂದು ರೆಡ್ಮಿ ಕಂಪನಿಯ ಮೊಬೈಲ್ ಫೋನ್ ದೊರಕಿತು ಹಾಗೂ ಆತನ ಕೈಯಲ್ಲಿದ್ದ ಪ್ಲಾಸ್ಟಿಕ್ ಕವರಿನಲ್ಲಿ ಪೇಪರ್ ನಲ್ಲಿ ಸುತ್ತಿದ್ದ 9 ಸುರಳಿ ಆಕಾರದಲ್ಲಿ ಇದ್ದ ಗಾಂಜಾ ವಸ್ತು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಗಾಂಜಾವನ್ನು ಸ್ಥಳದಲ್ಲಿಯೇ ತೂಕ ಮಾಡಲಾಗಿ ಅದು ಒಟ್ಟು 52 ಗ್ರಾಂ ಇತ್ತು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಭಾವಚಿತ್ರವನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ಆರೋಪಿತರನ್ನು ಸದರಿ ಗಾಂಜಾವನ್ನು ಎಲ್ಲಿಂದ ಪಡೆದುಕೊಂಡು ಬಂದೆ ಮತ್ತು ಅದನ್ನು ಸ್ವಾಧೀನ ಹೊಂದಲು ಪರವಾನಗಿ ಹೊಂದಿದ್ದೀಯಾ ಎಂದು ವಿಚಾರಿಸಲಾಗಿ ಆರೋಪಿತರು ಸದರಿ ಗಾಂಜಾವನ್ನು ಅಕ್ರಮವಾಗಿ ಮಾರಾಟ ಮಾಡಲು ಮತ್ತು ಅದನ್ನು ಸೇವಿಸಲು ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಗಾಂಜಾವನ್ನು ಒಂದು ವಾರದ ಹಿಂದೆ ಬಾಳೆಹೊನ್ನೂರು ಕಡ್ಲೆಮಕ್ಕಿಯ 2 ನೇ ಆರೋಪಿತರಿಂದ ರೂ. 2000/- ಕೊಟ್ಟು ಖರೀದಿ ಮಾಡಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಗಾಂಜಾವನ್ನು ಒಂದು ಬಿಳಿ ಬಣ್ಣದ ಬಟ್ಟೆಯಲ್ಲಿ ಸುತ್ತಿ ಎಂ ಅಕ್ಷರದಿಂದ ಅರಗಿನಿಂದ ಸೀಲು ಮಾಡಿ

ಅದಕ್ಕೆ ಚಾಸಾ-1 ಮತ್ತು ನನ್ನ ಮತ್ತು ಚಾಸಾ-7 ರವರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರನ್ನು ರಾತ್ರಿ 7.45 ರಿಂದ 8.45 ರವರೆವಿಗೂ ಸ್ಥಳದಲ್ಲಿಯೇ ದಾಖಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಮೂರು ಫೋಟೋಗಳನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ನನ್ನ ಹೇಳಿಕೆಯನ್ನು ದಿನಾಂಕಃ 12.9.2020 ರಂದು ಪೊಲೀಸರಿಗೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಗೆ ಈ ಕೆಳಕಂಡಂತೆ ಹೇಳಿಕೆಯ ಭಾಗಾಂಶವನ್ನು ಓದಿ ಹೇಳಲಾಯಿತು. “ ದಿನಾಂಕಃ11.9.2020 ರಂದು ---------------------- ಸಹಿ ಮಾಡಿರುತ್ತೇನೆ.” ಸದರಿ ಭಾಗಾಂಶವನ್ನು ಸಾಕ್ಷಿಯು ನಿರಾಕಸಿರುತ್ತಾರೆ. ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಪಾಟೀ ಸವಾಲು ಆರೋಪಿ ಪರ ಶ್ರೀ.ಎನ್ ವಿ ಎಸ್ ವಕೀಲರಿಂದಃಃಇಲ್ಲಾಃಃ**

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**Sd/-**
**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**